ಆ ಖರ್ಚನ್ನು ಏಕೆ ಮಾಡುತ್ತೀರಿ ಎಂದು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಒಂದು ಜೆರಾಕ್ಸ್ ಕಾಪಿ ಮಾಡಿಸಲಿಕ್ಕೆ ಎಂಟಾಣೆ ರೊಕ್ಕ ಖರ್ಚಾ ಆಗುತ್ತಿತ್ತು. ಆ ಜೆರಾಕ್ಸ್ ಕಾಪಿ ಮಾಡಿಸ ಲಿಕ್ಕ ಬೀದರ್‌ಗೆ ಕಳುಹಿಸುತ್ತಿದ್ದರು ಹಿಂದೆ ಮುರ್ನಾಲ್ಕು ವರ್ಷಗಳ ಕೆಳಗೆ ಅದನ್ನು ನಾವು ಆಡಳಿತ ಮಂಡಳಿಯವರಿಗೆ ಹೇಳಿ ಇವತ್ತು ಅಲ್ಲಿ ಜೆರಾಕ್ಸ್ ಮೆಷಿನ್ ಇಟ್ಟುಕೊಂಡಿದ್ದಾರೆ. ಇಂತಹದ್ದು ಅನೇಕ ರೂಪದಲ್ಲಿ ಖರ್ಚಾಗುವಂತಹದ್ದನ್ನು ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ತಡೆದು ಅನುಕೂಲ ಮಾಡಲಾಗಿದೆ. ಅಲ್ಲಿನ ಜನರಿಗೆ ಆಸೆರೆಯಾಗಬೇಕೆನ್ನುವ ದೃಷ್ಟಿಯಿಂದ ಸದನದ ಮೂಲಕ ಅವರ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈಗಾಗಲೇ ಸಾಕಷ್ಟು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಮಯ 6.35 ಗಂಟೆಯಾಗಿದೆ. ಈಗ ಉತ್ತರ ಕೊಡಬೇಕೆಂದರೆ ಒಂದೆರಡು ಗಂಟೆಯಾಗುತ್ತದೆ. ತಮ್ಮೆಲ್ಲರ ಒಪ್ಪಿಗೆ ಇದ್ದರೆ, ಉತ್ತರ ಕೊಡುವುದನ್ನು ನಾಳೆಗೆ ಇಟ್ಟುಕೊಳ್ಳಬಹುದು. ಅಂದಾಜು ಇದೆ. ಇದು ಆಗಬಹುದು ತಾನೆ? ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

6. ಅನುಬಂಧ 1

ಮುಲ್ಕಿ ಹೋಬಳಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು

42 (80) - ಶ್ರೀ ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಹೋಬಳಿಯ 20 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಂಕಲಕರಿಯದಿಂದ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಆ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ಸಚಿವರು) :

ಅ) ಈ ಯೋಜನೆಗೆ ರೂ. 8.10 ಕೋಟಿ ಮೊತ್ತದ ರೇಖಾ ಅಂದಾಜನ್ನು ತಯಾರಿಸಲಾಗಿದೆ.

ಆ) ಈ ಯೋಜನೆಯ ತಾಂತ್ರಿಕ : ಆರ್ಥಿಕ ಕಾರ್ಯ ಸಾಧ್ಯತ್ವವನ್ನು ಪರಿಶೀಲಿಸಲಾಗುತ್ತಿದೆ.

ಮಡಿಕೇರಿಯಲ್ಲಿರುವ ಪ್ರಸಿದ್ಧ ಐತಿಹಾಸಿಕ ಗದ್ದುಗೆಯ ಜಾಗವನ್ನು ಪಾರ್ಕ ನಿರ್ಮಾಣ ಮಾಡುವ ಬಗ್ಗೆ

44 (94) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿಯಲ್ಲಿರುವ ಪ್ರಸಿದ್ಧ ಐತಿಹಾಸಿಕ ಗದ್ದಿಗೆಯ ಜಾಗವನ್ನು ಪಾರ್ಕ್ ನಿರ್ಮಿಸಿ ಅಭಿವೃದ್ಧಿಪಡಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಗದ್ದಿಗೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಯೋಜನೆ ಪಾರ್ಕ್ ನಿರ್ಮಾಣದಿಂದ ಸಾಧ್ಯವೇ; ಈ ಯೋಜನೆ ಯಾವ ಹಂತದಲ್ಲಿದೆ;

ಇ) ಇದಕ್ಕಾಗಿ ಈ ಹಿಂದೆ ಸರ್ಕಾರ ಭರವಸೆ ನೀಡಿದ್ದು ನಿಜವೇ;

ಈ) ಹಾಗಿದ್ದಲ್ಲಿ ಈ ಯೋಜನೆ ನಿರ್ಮಾಣಕ್ಕಾಗಿ ಈಗಾಗಲೇ ಬಿಡುಗಡೆಯಾಗಿರುವ ಹಣವೆಷ್ಟು;

ಉ) ಎಷ್ಟನ್ನು ಖರ್ಚು ಮಾಡಲಾಗಿದೆ; ಪಾರ್ಕ್ ನಿರ್ಮಾಣ ಕೆಲಸವನ್ನು ಯಾವಾಗ ಮುಗಿಸಲಾಗುತ್ತದೆ; ಪೂರ್ಣ ವಿವರ ನೀಡುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಗದ್ದುಗೆಯ ಸುತ್ತಲೂ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) - ಅದೇ -

ಈ) - ಅದೇ -

ಉ) - ಅದೇ -

ರಾಜ್ಯದಲ್ಲಿ ನೂತನ ಕಾಲೇಜುಗಳ ಪ್ರಾರಂಭ ಕುರಿತು

46 (98) - ಶ್ರೀ ಅಪ್ಪಚ್ಚು ರಂಜನ್, ಎಂ.ಪಿ (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳನ್ನು ಹಾಗೂ ಪದವಿ ಪೂರ್ಣ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರದ ನಿರ್ಧರಿಸಿದೆಯೇ?

ಆ) ನಿರ್ಧರಿಸಿದ್ದಲ್ಲಿ ಜಿಲ್ಲಾವಾರು ಪ್ರಾರಂಭಿಸಲು ಯೋಜಿಸಿರುವ ಶಾಲೆ - ಕಾಲೇಜುಗಳೆಷ್ಟು?

ಇ) ಇವು ಸಂಪೂರ್ಣ ಸರ್ಕಾರಿ ಶಾಲೆಗಳೇ ಅಥವಾ ಖಾಸಗಿ ಸಂಸ್ಥೆಯವರಿಗೂ ಮಂಜೂರಾತಿ ನೀಡಲಾಗುವುದೇ ಸರ್ಕಾರ ಹಾಗೂ ಖಾಸಗಿಯವರ ಕಾಲೇಜುಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು.

ಈ) ಈ ವರ್ಷ ಎಷ್ಟು ಶಾಲೆ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಎಲ್ಲೆಲ್ಲಿ ಮಂಜೂರಾತಿ ನೀಡಲಾಗಿದೆ.

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹೌದು